ವಿಷಯ :- ಹುಬ್ಬಳ್ಳಿ-ಧಾರವಾಡದಲ್ಲಿ ಬಡಜನರಿಗೆ ಸಹಕಾರಿ ಬ್ಯಾಂಕುಗಳಿಂದ ಸಹಾಯ ಧನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2316 (1845)

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ ನಗರ) :- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಮತ್ತು ಧಾರವಾಡ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಗುಡಿ-ಕೈಗಾರಿಕೆಗೆ ಸಹಕಾರಿ ಬ್ಯಾಂಕುಗಳು ಸಹಾಯ ನೀಡಿದೆ. ಅವುಗಳಲ್ಲಿ ಪ್ರಮುಖ ಗುಡಿ ಕೈಗಾರಿಕೆಗಳು ಯಾವುವು ; ಇದಕ್ಕಾಗಿ ಮಂಜೂರು ಮಾಡಿದ ಹಣವೆಷ್ಟು;

ಶ್ರೀ ಎನ್. ಎಮ್. ನಬಿ (ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು) :-

ಅ) ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 62 ಘಟಕಗಳಿಗೆ ಮತ್ತು ಧಾರವಾಡ ಜಿಲ್ಲೆಯಲ್ಲಿ 124 ಘಟಕಗಳಿಗೆ ಸಹಕಾರಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ನೀಡಲಾಗಿದೆ.

ಇವುಗಳಲ್ಲಿ ಪ್ರಮುಖವಾದ ಗುಡಿ ಕೈಗಾರಿಕೆಗಳು ಯಾವುದೆಂದರೆ ಕುಂಬಾರಿಕೆ, ಪಾದರಕ್ಷೆ ತಯಾರಿಕೆ, ಚರ್ಮಗಾರಿಕೆ, ನೇಯ್ಗೆ, ನಿಟ್ಟಿಂಗ್, ಬಡಗಿ, ಅಗರಬತ್ತಿ ತಯಾರಿಕೆ, ಹಗ್ಗ ತಯಾರಿಕೆ ಮತ್ತು ಸೆಣಬಿನ ಚೀಲ ತಯಾರಿಕೆ ಮುಂತಾದವುಗಳಾಗಿರುತ್ತವೆ.

ಇವುಗಳಾಗಾಗಿ ಒಟ್ಟು ರೂ. 49.80 ಲಕ್ಷಗಳ ಹಣ ಮಂಜೂರು ಮಾಡಲ್ಪಟ್ಟಿರುತ್ತದೆ.

ವಿಷಯ :- ಹುಬ್ಬಳ್ಳಿ ನಗರದಲ್ಲಿ ಆಧುನಿಕ ರಂಗಮಂದಿರ ನಿರ್ಮಾಣ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2317 (2383)

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ ನಗರ) :- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಾಂಸ್ಕೃತಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ನಗರದಲ್ಲಿ ಆಧುನಿಕ ರಂಗಮಂದಿರವನ್ನು ನಿರ್ಮಿಸಲು ರಾಜ್ಯ ಸರ್ಕಾರ 50-00 ಲಕ್ಷ ರೂ. ಗಳನ್ನು ನೀಡಲು ವಾಗ್ದಾನ ಮಾಡಿದ್ದು, ಆದರಲ್ಲಿ 10-00 ಲಕ್ಷ ರೂ. ಬಿಡುಗಡೆಯಾಗಿರುವುದು ನಿಜವಲ್ಲವೇ?

ಆ) ರಂಗಮಂದಿರ ನಿರ್ಮಾಣಕ್ಕೆ ನಿವೇಶನ ಗುರುತಿಸಲಾಗಿದೆಯೇ? ಹಾಗೂ ಈ 10-00 ಲಕ್ಷ ರೂ. ಗಳನ್ನು ಯಾವ ಬಾಬ್ತಿನಲ್ಲಿಡಲಾಗಿದೆ?

ಇ) ಈ ರಂಗಮಂದಿರ ನಿರ್ಮಾಣ ಕಾರ್ಯ ಯಾವಾಗ ಆರಂಭವಾಗಲಿದೆ?

ಶ್ರೀ ಮತಿ ಬಿ. ಟಿ. ಲಲಿತಾನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು.) :-

ಅ) ಹುಬ್ಬಳ್ಳಿ ಕಲಾಭವನ ನಿರ್ಮಾಣಕ್ಕಾಗಿ ಒಟ್ಟು 11-00 ಲಕ್ಷ ರೂ. ಗಳನ್ನು ಧಾರವಾಡ-ಹುಬ್ಬಳ್ಳಿ ನಗರಪಾಲಿಕೆಯ ಆಯುಕ್ತರಿಗೆ ಬಿಡುಗಡೆ ಮಾಡಿದೆ.

ಆ) ಇಲ್ಲ. ಹುಬ್ಬಳ್ಳಿ-ಧಾರವಾಡ ನಗರಪಾಲಿಕೆಯ ವಶದಲ್ಲಿದೆ.

ಇ) ನಿವೇಶನವನ್ನು ಗುರುತಿಸದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ರಾಜ್ಯದಲ್ಲಿರುವ ಜವಳಿ ಕಾರ್ಖಾನೆಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2318 (2854)

ಶ್ರೀ ಅಶೋಕ್ ಕಾಟ್ಟೆ (ಹುಬ್ಬಳ್ಳಿ ನಗರ) :- ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ, ಮತ್ತು ಪರಿಸರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಲ್ಲಿ ಎಷ್ಟು ಜವಳಿ ಕಾರ್ಖಾನೆ (ಟೆಕ್ಸ್‌ಟೈಲ್ ಮಿಲ್ಸ್) ಇದೆ?

2) ಒಂದು ಜವಳಿ ಕಾರ್ಖಾನೆ ತೆರೆಯಲು ಎಷ್ಟು ವೆಚ್ಚ ಬರುವುದು?

3) ಈಗ ಹೊಸದಾಗಿ ಎಷ್ಟು ಕಾರ್ಖಾನೆಗಳಿಗೆ ಲೈಸೆನ್ಸ್ ಕೊಟ್ಟಿದ್ದೀರಿ?

4) ಈ ವರ್ಷದ ಬಡ್ಜೆಟಿನಲ್ಲಿ ಜವಳಿ ಉದ್ಯಮಕ್ಕೆ ಎಷ್ಟು ಹಣವನ್ನು ಒದಗಿಸಲಾಗಿದೆ?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ, ಮತ್ತು ಪರಿಸರ ರಾಜ್ಯ ಸಚಿವರು) :-

1) 50

2) 35,00 ಕದಿರುಗಳು ಸಾಮರ್ಥ್ಯವುಳ್ಳ ಒಂದು ನೂಲಿನ ಗಿರಣಿಯನ್ನು ಸ್ಥಾಪಿಸಲು ಸುಮಾರು ರೂ. 35-00 ಕೋಟಿ ಬೇಕಾಗುತ್ತದೆ.

3) 8

4) ರೂ. 231-00 ಲಕ್ಷ.

ವಿಷಯ :- ಹುಬ್ಬಳ್ಳಿ-ಧಾರವಾಡದಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2319 (1227)

ಶ್ರೀ ಅಶೋಕ್ ಕಾಟ್ಟೆ (ಹುಬ್ಬಳ್ಳಿ ನಗರ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ, ಧಾರವಾಡ ಮಹಾನಗರದಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು;